ಸಂ.ಕೈಜಾಇ/ಜವಳಿ/ಟಿ3. 2/ವಿ.ಶೇ.ಬಂ/ಮಾರ್ಗಸೂಚಿ/2007-08 ದಿನಾಂಕ:4-9-2007

## ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಯೋಜನೆಯ ಮಾರ್ಗಸೂಚಿಗಳು

ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳು ತನ್ನ ಸಾಲಕೊಂಡಂತಹ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ರಾಜ್ಯ ಸರ್ಕಾರದವತಿಯಿಂದ ಷೇರು ಬಂಡವಾಳ ಹೂಡಿಕೆ ಮೊತ್ತವಾಗಿ ನೀಡಲಾಗುವುದು. ಈ ಮೊತ್ತವನ್ನು ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳು ಬ್ಯಾಂಕ್‌ಗಳ ಮುಖಾಂತರ ಹೂಡಿಕೆ ಮಾಡಿ ಸಾಲ ಎತ್ತುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಸಂಘದ ಉತ್ಪಾದನಾ ಮತ್ತು ಮಾರಾಟ ಚಟುವಟಿಕೆಗಳ ವಹಿವಾಟನ್ನು ಅಭಿವೃದ್ಧಿಪಡಿಸಲು ಪ್ರತಿ ಸಂಘಕ್ಕೆ ಸರ್ಕಾರದ ಪಾಲಾಗಿ ಷೇರು ಬಂಡವಾಳವನ್ನು ನೀಡಲಾಗುವುದು.

### ಅ) ಅರ್ಹತೆಗಳು :-

1) ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ನಿಬಂಧನೆಗಳನ್ವಯ ನೋಂದಣಿಯಾಗಿರಬೇಕು.
2) ಸಂಘವು ನೇಯ್ಗೆ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರಬೇಕು.
3) ಸಂಘವು ಪದನಿಮಿತ್ತ ಕಾರ್ಯದರ್ಶಿ ಹುದ್ದೆಯನ್ನು ಹೊಂದಿರಬೇಕು.
4) ಸಂಘವು ಕಾರ್ಯ ನಿರತ ಉತ್ಪಾದನಾ ಮಗ್ಗಗಳನ್ನು ಹೊಂದಿರಬೇಕು.
5) ಸಂಘವು ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಹೊಂದಿರಬಾರದು.
6) ಸಂಘವು ಹೊಂದಿರುವ ಸದಸ್ಯರ ಷೇರು ಸಂಗ್ರಹ ಮೊತ್ತಕ್ಕೆ ಸಮಾನಾಂತರವಾಗಿ ಅಥವಾ ಸಂಘದ ಉಪ ನಿಬಂಧನೆಯಲ್ಲಿ ಅವಕಾಶವಿರುವ ಅಥವಾ ಮಂಜೂರಾತಿ ಪ್ರಾಧಿಕಾರದ್ದು ನಿರ್ಧರಿಸುವ ಮೊತ್ತದಷ್ಟು ಷೇರು ಬಂಡವಾಳವಾಗಿ ಪಡೆಯಲು ಅರ್ಹವಿರುತ್ತದೆ.

### ಆ) ಮಂಜೂರಾತಿಗೆ ಸಲ್ಲಿಸಬೇಕಾದ ದಾಖಲಾತಿಗಳು

1. ನಮೂನೆ 1 ರಿಂದ 29 ರಲ್ಲಿ ಸಂಘದ ಮಾಹಿತಿ.
2. ಸಂಘದ ನೋಂದಣಿ ಪತ್ರದ ಪ್ರತಿ.
3. ಬೈಲಾ ಪ್ರತಿ / ಉಪ ನಿಯಮ
4. ಆಡಳಿತ ಮಂಡಳಿಯ ಠರಾವು.
5. ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ.
6. ಸಂಘವು ಸದಸ್ಯರಿಂದ ಸಂಗ್ರಹಿಸಿದ ಷೇರು ಬಂಡವಾಳ ಹೂಡಿಕೆ ದೃಢೀಕರಣ ಪತ್ರ.
7. ಸಂಘದಲ್ಲಿ ನೋಂದಾಯಿತ ಸದಸ್ಯರ ಪಟ್ಟಿ.
8. ಸಂಘದ ಕಾರ್ಯ ಚಟುವಟಿಕೆಗಳ ವರದಿ.
9. ಆಡಿಟ್ ವರದಿ.

### ಇ) ಹಣ ಬಿಡುಗಡೆಗೆ ನಿಬಂಧನೆಗಳು

1) ಮಂಜೂರಾದ ಷೇರು ಬಂಡವಾಳ ಮೊತ್ತಕ್ಕೆ ಕರ್ನಾಟಕ ರಾಜ್ಯ ಘನತೆವೆತ್ತ ರಾಜ್ಯಪಾಲರ ಹೆಸರಿನಲ್ಲಿ ಮುದ್ರಿತ ಷೇರು ಸರ್ಟಿಫಿಕೇಟನ್ನು ಸಂಘವು ನೀಡಬೇಕು.
2) ಕಾರ್ಯಕಾರಿ ಆಡಳಿತ ಮಂಡಳಿ ನಿರ್ಣಯದ ಪ್ರತಿ.
3) ಸಂಕ್ಷಿಪ್ತ ಪ್ರಗತಿ ವರದಿ.

ಈ) <u>ಇತರ ಷರತ್ತುಗಳು.</u>

1) ಸಂಘವು ಗಳಿಸಿದ ವಾರ್ಷಿಕ ಲಾಭದಲ್ಲಿ ಪ್ರತಿ ವರ್ಷವೂ ಸಹ ತನ್ನ ಸದಸ್ಯರಿಗೆ ನೀಡುವ ಡಿ. ಕ- ಮೊತ್ತದಷ್ಟೇ ಸರ್ಕಾರದ ಷೇರು ಬಂಡವಾಳ ಮೊತ್ತಕ್ಕೆ ಡಿವಿಡೆಂಡನ್ನು ಘೋಷಿಸಿ, ಸರ್ಕಾರದ ಖಜಾನ ಜಮೆ ಮಾಡಬೇಕು.

2) ಸರ್ಕಾರದ ಷೇರು ಬಂಡವಾಳ ಮೊತ್ತವನ್ನು ಡಿ.ಸಿ.ಸಿ. ಬ್ಯಾಂಕ್/ಹಣಕಾಸು ಸಂಸ್ಥೆಗಳ ಮುಖಾಂತರ ಸಾ ಪತ್ತಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಈ ಮೊತ್ತವನ್ನು ಸಂಘದ ಉತ್ಪಾದನ ಚಟುವಟಿಕೆ / ವಹಿವಾಟಿಗೆ ಮಾತ್ರ ವಿನಿಯೋಗಿಸುವುದು.

3) ಸಂಘವು ಪ್ರತಿ ತ್ರೈಮಾಸಿಕ ಪ್ರಗತಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

4) ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು,ಕೈಮಗ್ಗ ಮತ್ತು ಜವಳಿ ಇವರು ಈ ರೀತಿ ಬಿಡುಗ ಮಾಡಿರುವ ಷೇರು ಮೊತ್ತಕ್ಕೆ ನಿಯಮಾನುಸಾರ ಹಣ ಬಳಕೆ ಪತ್ರವನ್ನು ದೃಢೀಕರಿಸಿ ಕೇಂದ್ರ ಕಛೇರಿ ಸಲ್ಲಿಸುವುದು.

5) ಸರ್ಕಾರದ ಷೇರು ಬಂಡವಾಳ ಮೊತ್ತಕ್ಕೆ ಪ್ರತಿ ವರ್ಷವೂ ಸಹ ಡಿವಿಡೆಂಡ್ ಪಾವತಿಯ ಖಾತೆಯ ಸಂಘದಲ್ಲಿ ಕಡ್ಡಾಯವಾಗಿ ರಿಜಿಸ್ಟರ್ ನಲ್ಲಿ ನಮೂದಿಸುವುದು ಹಾಗೂ ಇದನ್ನು ಜಿಲ್ಲಾ ಮಟ್ಟ ಅಧಿಕಾರಿಗಳು ಪರಿಶೀಲಿಸಿ ಕಾಲಕಾಲಕ್ಕೆ ವರದಿ ಸಲ್ಲಿಸುವುದು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ಬೆಂಗಳೂರು.